ಅಧ್ಯಕ್ಷರು.—(ಡಿ) ಭಾಗದಲ್ಲಿ ಇಷ್ಟಿಷ್ಟು ಬಾವಿಗಳಿಗೆ ಎಂದು ಉತ್ತರ ಇದೆ.

ಶ್ರೀ ಟಿ. ಹನುಮಯ್ಯ.—ಒಂದೊಂದು ಬಾವಿಗೆ ಎಷ್ಟೆಷ್ಟು ಬೇಕಾಗುವುದೆಂಬುದನ್ನು ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಟಿ. ಹನುಮಯ್ಯ.—20,000 ರೂಪಾಯಿಗಳು ಎಷ್ಟು ಬಾವಿಗಳಿಗೆ ಸಾಕಾಗಬಹುದು?

ಶ್ರೀ ಟಿ. ಚನ್ನಯ್ಯ.—ಇಷ್ಟೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ, ಒಂದು ಬಾವಿಗೆ ಎರಡು ಸಾವಿರ ರೂಪಾಯಿಗಳು ಬೇಕಾಗಬಹುದು, ಇನ್ನೊಂದಕ್ಕೆ ನಾಲ್ಕು ಸಾವಿರ ರೂಪಾಯಿಗಳು ಖರ್ಚಾಗಬಹುದು. ಇಷ್ಟೇಬೇಕೆಂದು ಮೊದಲೇ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಬೆಂಗಳೂರು ಜಿಲ್ಲೆಗೆ 11,000 ರೂಪಾಯಿ ಒದಗಿಸಲಾಗಿದೆ, ಇದರಲ್ಲಿ ಎಷ್ಟು ಬಾವಿಗಳಾಗಬಹುದು.

(ಉತ್ತರವಿಲ್ಲ).

ಶ್ರೀ ಜಿ. ದುಗ್ಗಪ್ಪ.—ಒಂದೊಂದು ಬಾವಿಗೆ 800 ರೂಪಾಯಿ ಸಾಕಾಗುತ್ತದೆಯೇ?

Sri T. CHANNIAH—It depends on several factors.

ಶ್ರೀ ಶಿವನಂಜೇಗೌಡ—ಕುಡಿಯುವ ನೀರಿನ ಬಾವಿ ಜನರಿಗೆ ಬಹಳ ಅವಶ್ಯಕವಾದುದರಿಂದ ಜಾಗ್ರತೆ ಮೈಸೂರು ಜಿಲ್ಲೆಗೆ 20,000 ರೂಪಾಯಿ ಕೊಟ್ಟು ಒಂದೊಂದು ತಾಲ್ಲೂಕಿಗೂ ಒಂದೊಂದಾದರೂ ಬಾವಿ ತೆಗೆಸಿದರೆ ಜಿಲ್ಲೆಗೆಲ್ಲಾ ಅನುಕೂಲಮಾಡಿದಂತಾಗುತ್ತದಲ್ಲವೆ?

ಶ್ರೀ ಟಿ. ಚನ್ನಯ್ಯ.—ನಾನು ಆಗಲೇ ಹೇಳಿದ್ದೇನೆ. ಬಾವಿ ಕಾಮಗಾರಿಗಳನ್ನು ಜಿಲ್ಲಾಬೋರ್ಡಿನವರಿಗೆ ವಹಿಸಬೇಕೆಂದು ಮಾಡಿದ್ದೇವೆ. ಅವರು ಬೇಗ ಕೆಲಸ ಪೂರೈಸಲು ಪ್ರಯತ್ನಮಾಡಬೇಕು.

ಶ್ರೀ ಶಿವನಂಜೇಗೌಡ.—ಇದು ಬಹಳ ಒಳ್ಳೆಯ ಕಾರ್ಯವಲ್ಲವೆ?

ಅಧ್ಯಕ್ಷರು.—ಒಳ್ಳೆಯ ಕಾರ್ಯ ನಿಜ; ಬೇರೆ ಏನಾದರೂ ಪ್ರಶ್ನೆಯಿದ್ದರೆ ಕೇಳಿ.

ಶ್ರೀ ಶಿವನಂಜೇಗೌಡ—ಇದಕ್ಕೆ ಹೆಚ್ಚು ಹಣ ಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಯೋಚಿಸುತ್ತೇವೆಂದು ಮೊದಲೇ ಹೇಳಿದ್ದೇನೆ.

ಶ್ರೀ ಕೆ. ಎ. ಬೈರೇಗೌಡ.—ಬಾಕಿ ಡಿಸ್ಟ್ರಿಕ್ಟ್‌ಗಳಿಗೆ ಹೆಚ್ಚು ಹಣ ಕೊಟ್ಟು ಬೆಂಗಳೂರು ಡಿಸ್ಟ್ರಿಕ್ಟ್‌ಗೆ ಕಡಮೆ ಕೊಟ್ಟಿದ್ದೀರಿ, ಏಕೆ ಹೀಗೆ ಪಕ್ಷಪಾತ ಮಾಡಿರುವುದು?

ಶ್ರೀ ಟಿ. ಚನ್ನಯ್ಯ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಕೆ. ಎ. ಬೈರೇಗೌಡ.—ಬೆಂಗಳೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದೆ ದೊಡ್ಡ ಸಮಸ್ಯೆಯಾಗಿದೆ. ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಅಭಾವ ಎಂದು ನಾನು ಅನೇಕ ಸಾರಿಹೇಳಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಹೇಳಿದ್ದೀರಿ.

ಶ್ರೀ ಕೆ. ಎ. ಬೈರೇಗೌಡ.—ಅದರ ಮೇಲೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಹೆಚ್ಚಿಗೆ ಹಣ ಒದಗಿಪಲು ಪ್ರಯತ್ನಿಸುತ್ತೇವೆ?

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಬಾವಿಗಳನ್ನು ತೆಗೆಸುವ ಕೆಲಸವನ್ನು ಆಗಲೇ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ವಹಿಸಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಗ್ರಾಮಾಂತರಗಳಲ್ಲಿ ಕುಡಿಯುವನೀರಿನ ಬಾವಿಗಳನ್ನು ಒದಗಿಸುವುದು ಇನ್ನು ಮುಂದೆ ಜಿಲ್ಲಾ ಬೋರ್ಡುಗಳ ಜವಾಬ್ದಾರಿಯೆಂದು ಈ ಮೊದಲೇ ತಿಳಿಸಿದ್ದೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈಗ ಹೊಸ ಡಿಸ್ಟ್ರಿಕ್ಟ್ ಬೋರ್ಡ್ ಕಾನೂನು ಪ್ರಕಾರ ಆವರಿಗೆ ರೆವೆನ್ಯೂನಿಂದ ಹಣ ಕೊಟ್ಟ್ರೇದ್ದೀರಾ?

ಶ್ರೀ ಟಿ. ಚನ್ನಯ್ಯ.—ಕಾನೂನು ರೀತ್ಯ provide ಮಾಡಿದ್ದೇವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಬಜೆಟ್ಟಿನಲ್ಲಿ provide ಮಾಡಿರಬಹುದು; ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಟ್ಟಿದ್ದೀರಾ?

Sri T. CHANNIAH.—I will look into that, Sir.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತುಮಕೂರು ಜಿಲ್ಲೆಗೆ 66,000 ರೂಪಾಯಿ ಕೊಟ್ಟು ಇತರ ಕಡೆಗೆ ಕಡಿಮೆ ಕೊಡಲು ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಎಷ್ಟು ಹಣವನ್ನೊದಗಿಸಲು ಸರ್ಕಾರಕ್ಕೆ ಸಾಧ್ಯವೋ ಅಷ್ಟನ್ನೊದಗಿಸಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅದು ನನ್ನ ಪ್ರಶ್ನೆಗೆ ಉತ್ತರವಲ್ಲ; ನಾನು ಕೇಳುವುದು ತುಮಕೂರು ಜಿಲ್ಲೆಯಲ್ಲಿ 512 ಬಾವಿಗಳಿಗೆ 66,000 ರೂಪಾಯಿ ಕೊಟ್ಟ ರುವಾಗ ಹಾಸನ ಜಿಲ್ಲೆಯಲ್ಲಿ 563 ಬಾವಿಗಳಿಗೆ 20,000 ರೂಪಾಯಿ ಕೊಡಲು ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಅದು ಸ್ಥಳೀಯ ಅಧಿಕಾರಿಗಳ ವರದಿಯನ್ನು ಅವಲಂಬಿಸಿರುತ್ತದೆ.

Sri D. DEVARAJ URS—Money is provided in the Budget no doubt. But the money has not been made over nor is it asked for in the Appropriation Bill!

Sri T. CHANNIAH.—It is provided in the Budget.

Sri D. DEVARAJ URS.—What is the use if money is not given over to the District Boards? In view of this, the Government are not in a position to take up the well work.

(No reply.)

ಶ್ರೀ ಕೆ. ಪ್ರಭಾಕರ್.—ಹರಿಜನರಿಗೆ ಪ್ರತ್ಯೇಕವಾಗಿ ಬಾವಿಗಳನ್ನು ತೆಗೆಸುವುದರಿಂದ ನ್ಯಾಷನಲ್‌ವೇಸ್ಟೇಜ್ ಆಗುತ್ತದೆಂದು ಒಂದು ಎಕಾನಮಿ ದೃಷ್ಟಿಯಿಂದ ಅದನ್ನು ತಪ್ಪಿಸಿ, ಈ ಜನಗಳೂ ಸಹ ಸಾರ್ವಜನಿಕ ಹಿಂದುಗಳ ಬಾವಿಗಳಿಂದಲೇ ನೀರನ್ನು ಬಳಸಬಹುದೆಂದು ಹೇಳಲಾಗಿತ್ತು. ಆ ಬಗ್ಗೆ ಸರ್ಕಾರದವರು ಇಲ್ಲಿಯವರೆಗೆ ಏನು ಕಾರ್ಯಕ್ರಮಗಳನ್ನು ಕೈಕೊಂಡಿದ್ದೀರಿ?

ಶ್ರೀ ಟಿ. ಚೆನ್ನಯ್ಯ.—ಇಲ್ಲಿಯವರೆಗೂ ನಾವು ಹರಿಜನರಿಗೆ ಪ್ರತ್ಯೇಕವಾಗಿಯೇ ಬಾವಿಗಳನ್ನೊದಗಿಸುತ್ತಾ ಬಂದಿದ್ದೇವೆ. ಕ್ಯಾಸ್ಟ್ ಹಿಂದೂಸ್ ಬಾವಿಗಳಿಂದ ಇವರು ನೀರನ್ನು ಬಳಸುತ್ತಿಲ್ಲ. ಹಣದ ಅನುಕೂಲತೆ ಸಿಕ್ಕಿದಂತೆಲ್ಲಾ ಬಾವಿಗಳನ್ನು ಮಾಡಿಸಲಾಗುತ್ತಿದೆ.

**Amount allotted to each taluk in Chitaldrug District for famine relief works, drinking water wells and I. V. C. roads.**

*Q.*—131. **Sri J. MOHAMED IMAM** (Jagalur).—

Will the Government be pleased to state:—

the amounts allotted to each taluk in Chitaldrug District during the current year for :

(*i*) famine relief works ;

(*ii*) drinking water wells ;

(*iii*) inter-village communication roads ?

*A.*—**Sri Kadidal MANJAPPA** (Minister of Revenue and Public and Works).—

(*i*) Famine relief works.—

| | | Rs. |
|---|---|---|
| 1 Chitaldrug | | Nil |
| 2 Challakere | ... | 5,000 |
| 3 Hiriyur | ... | 5,000 |
| 4 Molakalmuru | .. | 5,000 |
| 5 Davangere | ... | 10,000 |
| 6 Holalkere | ... | ... |
| 7 Hosadurga | ... | 5,000 |
| 8 Jagalur | ... | ... |
| Total | ... | 30,000 |
| (Reserve with the Deputy Commissioner) | ... | 85,000 |
| Grand Total | ... | 1,15,000 |

(*ii*) Drinking water wells.—

| | | Rs. |
|---|---|---|
| 1 Chitaldrug | ... | 2,840 |
| 2 Challakere | ... | 3,571 |
| 3 Hiriyur | ... | 3,556 |
| 4 Molakalmuru | ... | 407 |
| 5 Davangere | ... | 2,469 |
| 6 Holalkere | ... | 3,717 |
| 7 Hosadurga | ... | 1,800 |
| 8 Jagalur | ... | 840 |
| 9 Harihar | ... | 800 |
| Total | ... | 20,000 |

(*iii*) Inter-village communications.—

| | | Rs. |
|---|---|---|
| 1 Chitaldrug | ... | 2,878 |
| 2 Challakere | ... | 1,843 |
| 3 Hiriyur | ... | 648 |
| 4 Molakalmuru | ... | 2,878 |
| 5 Davangere | ... | 1,800 |
| 6 Holalkere | .. | 1,350 |
| 7 Hosadurga | ... | ... |
| 8 Jagalur | ... | ... |
| 9 Harihar | ... | 483 |
| Total | ... | 10,000 |

ಶ್ರೀ ಜೆ. ಮಹಮ್ಮದ್ ಇಮಾಂ.—ತಮ್ಮ ಉತ್ತರದಲ್ಲಿ ಹೇಳಿರುವ ಪ್ರಕಾರ ಚಿತ್ರದುರ್ಗ ಜಿಲ್ಲೆಗೆ ಕೇವಲ 30 ಸಾವಿರ ರೂಪಾಯಿಗಳನ್ನೊದಗಿಸಿದ್ದೀರಿ. ಅದರಿಂದ ಎಲ್ಲ ತಾಲ್ಲೂಕುಗಳ ಸೌಕರ್ಯಗಳೂ ಆಗುತ್ತವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಫ್ಯಾಮಿನ್ ರಿಲೀಫ್ ಯೋಜನೆಯ ಬಗ್ಗೆ 1 ಲಕ್ಷ 40 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ. ಇದರಲ್ಲಿ ಜಿ.ಎಂ.ಎಫ್. ಮತ್ತು ರಷ್ಯನ್ ಗಿಫ್ಟ್ ಬಗ್ಗೆ ಕೊಡಲಾದ ಮೊಬಲಗನ್ನು ಸೇರಿಸಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಪ್ರತಿಯೊಂದು ತಾಲ್ಲೂಕಿಗೂ ಎಷ್ಟೆಷ್ಟು ಕೊಡಲಾಗಿದೆಯೆಂಬುದು ತಮಗೆ ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ. ಜಿಲ್ಲಾವಾರ್ ಫಿಗರ್ಸ್ ಕೊಡಬಲ್ಲೆ. ಒಟ್ಟು 3 ಲಕ್ಷ 40 ಸಾವಿರ ಚಿಲ್ಲರೆಯಲ್ಲಿ, ಅಂದರೆ ರಷ್ಯನ್ ಗಿಫ್ಟಿನಲ್ಲಿ ಈ ಜಿಲ್ಲೆಗೆ 72 ಸಾವಿರ ಕೊಡಲಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಹೊಳಲ್ಕೆರೆ ಮತ್ತು ಜಗಳೂರು ಈ ಎರಡು ತಾಲ್ಲೂಕುಗಳಿಗೂ ತಾವೇನೂ ಒದಗಿಸಿಲ್ಲ. ಇವರ ಮೇಲೆ ತಮಗೇಕೆ ಅಷ್ಟು ಕೋಪ ? ಅವರೇನು ಎಲ್ಲಾ ಕೈಲಾಸವಾಸಿಗಳಾಗಲಿ ಎಂದೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಮೊಬಲಗನ್ನು ಹಂಚುವುದು ಸರ್ಕಾರವಲ್ಲ, ಡಿಸ್ಟ್ರೆಸ್ ರಿಲೀಫ್ ಸಮಿತಿ. ಅವರಿಗೆ ಒದಗಿಸಲಾಗಿದ್ದ ಹಣವನ್ನು ಪ್ರತಿಯೊಂದು ಜಿಲ್ಲೆಗೂ ಹಂಚುತ್ತಾರೆ. ಜಿಲ್ಲೆಯಲ್ಲಿ ಈ ಮಾನ್ಯ ಸಭೆಯ ಸದಸ್ಯರಿಂದೊಳಗೊಂಡ ಸಮಿತಿ ಇದೆ. ಆ ಸಮಿತಿಯ ಸಲಹೆ ಮೇರೆಗೆ ಜಿಲ್ಲಾಧಿಕಾರಿಗಳಿಗೆ ಒದಗಿಸಿದ ಮೊಬಲಗನ್ನು ಅವರು ತಾಲ್ಲೂಕುವಾರಾಗಿ ಹಂಚಬೇಕೆಂದು ಸೂಚನೆ ಕೊಡಲಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಹಣ ವಿನಿಯೋಗವಾಗಿದೆಯೆಂಬುದನ್ನು ಹೇಳುವಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅಲಾಟ್ ಮಾಡಿದ ವಿವರಗಳಿವೆ. ಖರ್ಚಾದ ವಿವರಗಳಿಲ್ಲ.

**Sri J. MOHAMED IMAM.**—It is the duty of the Government to provide me with the information which I have asked, namely what is the amount allotted to each taluk in Chitaldrug District for Famine Relief Work.

ಶ್ರೀ ಕಡಿದಾಳ್ ಮಂಜಪ್ಪ.—ಫ್ಯಾಮಿಲ್ ರಿಲೀಫ್ ಫಂಡಿನಿಂದ ಮಾತ್ರ ಅಲಾಟ್ ಆದ ವಿವರಗಳಿವೆ. ಜಿ. ಎಂ. ಎಫ್. ಮತ್ತು ರಷ್ಯನ್ ಗಿಫ್ಟಿಗೆ ಸಂಬಂಧ ಪಟ್ಟ ವಿವರಗಳಿಲ್ಲ.

Mr. SPEAKER.—He said it is Rs. 72,000 and odd out of Rs. 3 lakhs and odd.

Sri Kadidal MANJAPPA.—It is Rs. 72,266.

ಚಿಳ್ಳಕೆರೆಗೆ 4,104 ರೂಪಾಯಿಗಳು. ಹಿರಿಯೂರಿಗೆ 1,838 ರೂಪಾಯಿಗಳು ಮತ್ತು ಜಗಳೂರಿಗೆ 188 ರೂಪಾಯಿಗಳು. ಇದೆಲ್ಲಾ ಆಯಾ ಸ್ಥಳಿಯ ವಿದ್ಯಮಾನಗಳ ಮೇಲೆ ಹೋಗುತ್ತದೆ. ಆಯಾ ಜಿಲ್ಲೆಯ ಡೆಪ್ಯುಟಿ ಕಮಿಷನ್ನರ, ಮತ್ತು ಡಿಸ್ಟ್ರೆಸ್ ರಿಲೀಫ್ ಸಮಿತಿಯವರ ಅಭಿಪ್ರಾಯ ಸಡೆದು ಅದರಂತೆ ತೀರ್ಮಾನಮಾಡತಕ್ಕದ್ದಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಜಗಳೂರಿಗೆ 188 ರೂಪಾಯಿಗಳನ್ನು ಒದಗಿಸಲಾಗಿದೆಯೆಂದು ತಿಳಿಸಿದಿರಿ. ಅದರಿಂದೇನು ಕೆಲಸ ನಡೆಸಲು ಸಾಧ್ಯ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸ್ಥಳಿಯ ವಿದ್ಯಮಾನದ ಮೇಲೆ ಅವಲಂಭಿಸುತ್ತದೆ—ಹಣವನ್ನು ಹಂಚತಕ್ಕ ಜವಾಬ್ದಾರಿ, ಸ್ಥಳೀಯ ಅಧಿಕಾರಿಗಳದು ಮತ್ತು ಈ ಶಾಸನ ಸಭಾಸದಸ್ಯರಿಂದೊಡಗೂಡಿರತಕ್ಕಂಥಾ ಸಮಿತಿಯವರದು.

Sri J. MOHAMED IMAM.—I attended the last meeting. The Deputy Commissioner said that an amount of Rs. 8 lakhs was available for Distress Relief work. Is it a fact?

Sri Kadidal MANJAPPA.—It is correct.

Sri J. MOHAMED IMAM.—How much has been spent out of this? What is the amount allotted to each Taluk?

Sri Kadidal MANJAPPA.—Out of Rs. 8 lakhs, I am not in a position to definitely state the exact amount allotted for each Taluk.

Sri J. MOHAMED IMAM.—Can the Government tell me the amount spent at least for relief work in each taluk and the relief work that is being carried on vigorously?

Sri Kadidal MANJAPPA.—We have allotted the necessary amount. We are prepared to spend the amount necessary for distress relief. So far as the figures are concerned, I will ascertain from the Deputy Commissioner and get the exact figures and let the Hon'ble Member know.

Sri J. MOHAMED IMAM.—Is it not necessary under the present acute distress circumstances to spend this amount as expeditiously as possible to give relief to the people?

Sri Kadidal MANJAPPA.—There is no disagreement.

Sri J. MOHAMED IMAM.—So, is it not necessary that Government should take emergent and active steps before anything disastrous happens?

Sri Kadidal MANJAPPA.—So far as Government are concerned, I have already submitted that we have allotted the necessary funds, and we are going to speed up the work.

Sri J. MOHAMED IMAM.—Will the Minister tour this area immediately and see that the necessary thing will be done?

Sri Kadidal MANJAPPA.—I have already promised that I will tour this area after the session is over.

ಶ್ರೀ ಜೆ. ಮಹಮ್ಮದ್ ಇಮಾಂ.—ತಾವು ಈ ಬಾಬಿಗೆ 20 ಸಾವಿರ ಒದಗಿಸಿದ್ದೀರಿ. ಗೋಣೀಚೀಲದಲ್ಲಿ ದುಗ್ಗಾಣಿ ಹಾಕಿದಹಾಗಾಗಿದೆ.

How many well works can be carried on with this amount and how many fresh well works have been sanctioned out of this Rs. 20,000?

Sri Kadidal MANJAPPA.—Notice.

Sri J. MOHAMED IMAM.—Is it not a fact that pending bills for well works amount to Rs. 1½ lakhs and these pending bills are not paid and honoured?

Sri Kadidal MANJAPPA.—I concede that the amount allotted is insufficient. But it is already stated by my colleague that some amount has been allotted in the Budget for being given to the District Boards whose concern is to supply drinking water in rural areas.

Sri J. MOHAMED IMAM.—Have the Government taken over the pending well works and what is the method adopted for making payments of pending bills and arrears?

Sri Kadidal MANJAPPA.—I require notice.

Sri J. MOHAMED IMAM.—When the pending Bills themselves are not paid, how is it possible to take up new well works?

Sri Kadidal MANJAPPA.—I have not conceded the position that pending bills are not being paid. I will ascertain and do the necessary thing.

Sri J. MOHAMED IMAM.—Will the Government consider the existing state of affairs as to who should meet the

pending Bills ? How the Government are going to take up and execute new well works ?

**Sri Kadidal MANJAPPA.**—We will examine the question urgently.

---

## Minor and Major Tanks in Nelamangala, Magadi and Doddaballapur Taluks.

*Q.*—146. **Sri D. M. GOVINDARAJU** (Nelamangala). —

Will the Government be pleased to state :—

(*a*) the number and names of minor and major tanks in Nelam ngala, Magadi and Doddaballapur taluks ;

(*b*) out of them, the names of tanks which have been desilted and the amount spent in that behalf ?

*A.*—**Sri Kadidal MANJAPPA** (Minister for Revenue and Public Works).—

| | *Major* | *Minor* |
|---|---|---|
| (*a*) Nelamangala | 45 | 182 |
| Magadi ... | 50 | 101 |
| Doddaballapur | 22 | 230 |

For names *vide* printed register placed on the table of the House.

| | Rs. |
|---|---|
| (*b*) 1. Thimmasandra ... | 4,544 |
| 2. Hosakote tank ... | 3,423 |
| 3. Karapura village tank | 1,548 |
| 4. Kathehosahalli tank | 1,494 |
| 5. Ambalagere tank | 2,543 |

ಶ್ರೀ ಡಿ. ಎಂ. ಗೋವಿಂದರಾಜು.—ನೆಲಮಂಗಲ ತಾಲ್ಲೂಕಿನಲ್ಲಿ ಯಾವುದಾದರೂ ಕೆರೆಗಳನ್ನು ಡಿಸಿಲ್ಟಿಂಗ್ ಮಾಡಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೆಲಮಂಗಲ ತಾಲ್ಲೂಕಿನಲ್ಲಿ ಮಾಡಿಸಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗೆ ಕೆರೆಗಳ ಹೂಳನ್ನು ತೆಗೆಸಿಕೊಡಬೇಕೆಂದು ಯಾರಿಂದಲೂ ಅರ್ಜಿಗಳು ಬಂದಿರಲಿಲ್ಲವೆ ?

**Mr. SPEAKER.**—Last week that information has been furnished.

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

---

9-30 A.M.

## Remission granted in Chitaldrug District.

*Q.* 294. **Sri A. BHEEMAPPA NAIK** (Molakalmuru).—

Will the Government be pleased to state:—

(*a*) the areas in Chitaldrug District which were affected by famine ;

(*b*) the amount of remission granted in these areas both dry and wet during the current year ?

*A.*—**Sri Kadidal MANJAPPA** (Minister for Revenue and Public Works).—

(*a*) Except Holalkere Taluk, all other taluks of the District are considered to be areas where distress prevails.

(*b*) Wet assessment to the extent of Rs. 530 has been sanctioned as remission up till now. Further proposals from the Deputy Commissioner are awaited.

ಶ್ರೀ ಎ. ಭೀಮಪ್ಪ ನಾಯಕ್.—ಈ ತಹಲ್‌ವರೆಗೂ 530 ರೂಪಾಯಿಗಳನ್ನು ತರೀ ಕಂದಾಯದ ಮಾಫಿ ಮಂಜೂರಾತಿಯಾಗಿದೆಯೆಂದು ಹೇಳಿದ್ದೀರಿ. ಇದು ಯಾವ ಊರಿನಲ್ಲಿ, ಯಾವ ಕೆರೆಯ ಹಿಂದೆ ?

**Sri Kadidal MANJAPPA.**—I will place on the table of the House a list containing the proposals regarding the remissions in Chitaldrug District ; it is a big list. So far as remissions for the year 52-53 are concerned, the proposals have been submitted to the Revenue Commissioner and then he has to submit them in his turn to Government. As they are submitted, the remissions will be sanctioned and we have issued strict instructions to the Deputy Commissioner not to collect assessment where he has proposed for remission or postponement.

**Sri A. BHEEMAPPA NAIK.**—Does the Minister know definitely that collections are not made in those areas ?

**Sri Kadidal MANJAPPA.**—In the month of March itself a circular has been sent to the Deputy Commissioner that he should not collect the land revenue in those areas where he proposes either to remit or postpone the land revenue.

**Sri A. BHEEMAPPA NAIK.**—On what date did he submit the proposals ?

**Sri Kadidal MANJAPPA.**—Notice.

**Sri A. BHEEMAPPA NAIK.**—How long has this been pending either with the Deputy Commissioner or with the Revenue Commissioner ? Can you tell me the month ?

**Sri Kadidal MANJAPPA.**—They will be disposed of very early within a fortnight, as soon as they come to Government.